**<u>ದಿನಾಂಕಃ 15.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಎಂ ಟಿ ಎಸ್ ವಕೀಲರಿಂದಃ-</u>**

1. ತಾವು ಏನು ಓದಿದ್ದೀರಿ ಎಂದರೆ ಸಾಕ್ಷಿ ಎಂ ಎಸ್ ಡಬ್ಲ್ಯೂ ಎನ್ನುತ್ತಾರೆ. ನಾನು ಸಮಾಜ ಸೇವಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ತಮ್ಮ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ವಕೀಲರು ತಯಾರು ಮಾಡಿದ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ಓದಿ ತಿಳಿದು ಸಹಿ ಮಾಡಿದ್ದೇನೆ ಎನ್ನುತ್ತಾರೆ. ತಮಗೆ ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಬರೆಯಲು ಮತ್ತು ಓದಲು ಬರುತ್ತದೆಯಾ ಎಂದರೆ ಸಾಕ್ಷಿ ಬರುತ್ತದೆ ಎನ್ನುತ್ತಾರೆ. ವಾದಿಯು ಯಾವ ಕಾರಣಕ್ಕೆ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದು ಗೊತ್ತಾ ಎಂದರೆ ಸಾಕ್ಷಿ ಹಣದ ವಿಷಯಕ್ಕೆ ದಾವೆ ಮಾಡಿದ್ದಾರೆ ಎನ್ನುತ್ತಾರೆ.

2. ವಾದಿಯ ಕೋರಿಕೆ ಮೇರೆಗೆ ನಾನು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೆ ಪ್ರತಿವಾದಿಯು ವಾದಿಯಿಂದ ಯಾವಾಗ ಮತ್ತು ಎಷ್ಟು ಸಾಲದ ಹಣವನ್ನು ಪಡೆದುಕೊಂಡಿದ್ದಾರೆ ಎಂದು ಹೇಳುವಿರಾ ಎಂದರೆ ಸಾಕ್ಷಿ ದಿನಾಂಕ 28.02.2020ರಂದು ರೂ.1,20,000/- ಗಳು ಎಂದು ನುಡಿಯುತ್ತಾರೆ. ಸದರಿ ಹಣವನ್ನು ವಾದಿಯು ಪ್ರತಿವಾದಿಗೆ ಕೊಟ್ಟಿರುತ್ತಾರೆ ಎಂದು ತಾವು ಹೇಳಿದ್ದು ತಮ್ಮನ್ನು ಹೊರತುಪಡಿಸಿ ಬೇರೆ ಯಾರು ಇದ್ದರು ಎಂದರೆ ಸಾಕ್ಷಿ ಪ್ರತಿವಾದಿ ಮತ್ತು ಆಕೆಯ ಮಗಳು ಸವಿತಾ, ಸವಿತಾರವರ ಮಗಳು ಮೃಂದಾ, ತಾಯಮ್ಮನ ಮಗಳು ನಳಿನಾ, ಪುಷ್ಪಲತಾ ಎಂಬುವವರು ಇದ್ದರು ಎನ್ನುತ್ತಾರೆ.

3. ಪ್ರತಿವಾದಿಗೆ ವಾದಿ ಯಾವಾಗ ಹಣ ಕೇಳಿದ್ದಾರೆ ಎಂದು ತಮ್ಮ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಲದ ಭದ್ರತೆಗಾಗಿ ವಾದಿಯು ಏನಾದರೂ ದಾಖಲೆ ಪಡೆದಿದ್ದಾರಾ ಎಂದರೆ ಸಾಕ್ಷಿ ಆನ್ ಡಿಮ್ಯಾಂಡ್ ಪ್ರಮಾಣ ಪತ್ರ ಪಡೆದಿದ್ದರು ಎನ್ನುತ್ತಾರೆ. ನಿಪಿ-1 ಮತ್ತು 1(ಎ) ದಾಖಲೆಯಲ್ಲಿ ಬರೆದಿರುವ ಹಸ್ತಾಕ್ಷರ ಒಬ್ಬರದೇ ಎಂದರೆ ಸರಿ. ನಿಪಿ-1 ದಾಖಲೆಯಲ್ಲಿ ದಿನಾಂಕ ಖಾಲಿ ಇದೆ ಎಂದರೆ ಸರಿ. ಅದೇ ರೀತಿ ನಿಪಿ-1(ಎ) ದಾಖಲೆಯಲ್ಲಿ ದಿನಾಂಕ ಬರೆದು ಹೊಡೆದು ಹಾಕಿ ನಂತರ ಬೇರೆ ದಿನಾಂಕ ಬರೆದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬರೆಯುವಾಗ ತಪ್ಪು ದಿನಾಂಕ ಬರೆದಿದ್ದರಿಂದ ಅದನ್ನು ತಿದ್ದಿ ಬೇರೆ ದಿನಾಂಕ ಬರೆದಿದ್ದೇನೆ ಎನ್ನುತ್ತಾರೆ. ನಾನು ಮತ್ತು ವಾದಿ ತುಂಬಾ ಆತ್ಮೀಯರು ಎಂದರೆ ಸಾಕ್ಷಿಯು ತುಂಬಾ ಆತ್ಮೀಯರೆನಲ್ಲಾ ಒಂದೇ ಇಲಾಖೆಯಲ್ಲಿ ಕೆಲಸ ಮಾಡುತ್ತೇವೆ ಎನ್ನುತ್ತಾರೆ.

4. ವಾದಿಗೆ ಆರ್ಥಿಕ ಲಾಭ ಮಾಡಿಕೊಡುವ ದುರುದ್ದೇಶದಿಂದ ನಾನು ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಯಿಂದ ನಿಪಿ-1 ಮತ್ತು ನಿಪಿ-1ಎ ಹೊರತುಪಡಿಸಿ ಬೇರೆ ಯಾವುದಾದರೂ ದಾಖಲೆ ಪಡೆದಿದ್ದರಾ ಎಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿಗೆ ಯಾವುದೇ ಆರ್ಥಿಕ ಸಮಸ್ಯೆ ಇರಲಿಲ್ಲ ಮತ್ತು ವಾದಿಯಿಂದ ಯಾವುದೇ ಸಾಲದ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು ನಿಪಿ-1ಎ ದಾಖಲೆಗಳಲ್ಲಿ ಯಾವುದೇ ಸಾಕ್ಷಿದಾರರ ಸಹಿಗಳು ಇಲ್ಲ ಎಂದರೆ ಸರಿಯಲ್ಲ. ನಿಪಿ-1 ಮತ್ತು ನಿಪಿ-1ಎರಲ್ಲಿ ಹೆಸರಿದೆ ನನ್ನ ಪ್ರಮಾಣ ಪತ್ರದಲ್ಲಿ ಸಹಿ ಇದೆ ಆಗಾಗಿ ನಿಪಿ-1 ಮತ್ತು ನಿಪಿ-1ಎ ರಲ್ಲಿರುವ ಸಹಿ ತಮ್ಮದಲ್ಲ ಎಂದರೆ ಸಾಕ್ಷಿ ಸರಿ ಅಲ್ಲ ಎನ್ನುತ್ತಾರೆ. ತಾವು ಎರಡು ರೀತಿಯಲ್ಲಿ ಸಹಿ ಮಾಡುತ್ತೇನೆ ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆಗಾಗಿ ಪ್ರತಿವಾದಿಯು ವಾದಿಗೆ ಯಾವುದೇ ಹಣ ತೀರುವಳಿ

ಮಾಡುವ ಹೊಣೆಗಾರಿಕೆ ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಅನುಕೂಲಮಾಡಿಕೊಡಲು ಆತನ ಕೋರಿಕೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ